**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**
**ಇಂಡಿ.**
**ಸಿಸಿ.ನಂಃ** 789/2017

ಪಿ.ಡಬ್ಲ್ಯೂ– 2
ಸಿ.ಡಬ್ಲ್ಯು– 3

| | | |
|---|---|---|
| ಸಾಕ್ಷಿಯ ಹೆಸರು | : | ಇಮ್ರಾನ್ ಅಗರಖೇಡ |
| ತಂದೆ/ಗಂಡನ ಹೆಸರು | : | ಅಬ್ದುಲ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ಇಂಡಿ. |

**ದಿನಾಂಕ : 17–11–2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ ರವರಿಂದ:**

ಚಾಸಾ–2 ರವರ ಪರಿಚಯ ಇರುತ್ತದೆ.

ಈಗ ನೋಡುತ್ತಿರುವ ದಾಖಲೆ ಮೇಲೆ ನನ್ನ ಸಹಿ ಇರುತ್ತದ. ಸದರಿ ದಾಖಲೆ ಪಂಚನಾಮೆಯಾಗಿದ್ದು. ಅದನ್ನು ಈಗ ನಿಪಿ–3 ಎಂದು, ಅದರ ಮೇಲೆ ಇರುವ ಸಾಕ್ಷಿ ಸಹಿಯನ್ನು ನಿಪಿ:–3(ಎ) ಎಂದು ಗುರುತಿಸಲಾಯಿತು.

ಸುಮಾರು 2–3 ವರ್ಷಗಳ ಹಿಂದೆ ಇಂಡಿಯ ಬಸವೇಶ್ವರ ಸರ್ಕಲ್ ಹತ್ತಿರ ನಿಪಿ–3 ಕ್ಕೆ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಪೊಲೀಸರು ಯಾವುದೇ ಜಪ್ತು ಪಡೆದುಕೊಂಡಿಲ್ಲ ಮತ್ತು ಯಾವುದೇ ಜಪ್ತು ಪಂಚನಾಮೆ ಮಾಡಿಕೊಂಡಿಲ್ಲ. ನಿಪಿ–3 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪಂಚನಾಮೆಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ ಆಲಿಸಿ ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲು : ಮಾನ್ಯ ಸ.ಸ.ಅ. ರವರಿಂದ:**

ದಿ: 11.06.2016 ರಂದು ಸಾಯಂಕಾಲ 6.30 ರಿಂದ 7.15 ಗಂಟೆ ಅವದಿಯಲ್ಲಿ ಇಂಡಿ ತಾಲೂಕಿನ ಹೀರೆಬೇವನೂರು ಗ್ರಾಮದಲ್ಲಿ ಆರೋಪಿ 1 ಮತ್ತು 2 ರವರ ಬಿಳಿ ಬಣ್ಣದ ಕಾವಸಿಕ ಬಾಕ್ಸರ ದ್ವಿ ಚಕ್ರ ವಾಹನದ ಮೇಲೆಒಂದು ಬಿಳಿ ಬಣ್ಣದ ಪ್ಲಾಸ್ಟಿಕ ಗೊಬ್ಬರದ ಚೀಲದಲ್ಲಿ ಒಂದು ಲೀಟರ ಸಾಮರ್ಥ್ಯದ ಕಲಬೇರಿಕಿ ಶೆಂದಿವುಳ್ಳ 10 ಪ್ಲಾಸ್ಟಿಕ ಬಾಟಲಿಗಳನ್ನು ಸಾಗಾಟ ಮಾಡುತ್ತಿರುವಾಗ, ದ್ವಿ ಚಕ್ರ ವಾಹನದ ಚಾಲಕನಾದ ರಾಜೇಂದ್ರ ಸದಾಶಿವ ಶಿಂಗೆ ಮತ್ತು ಹಿಂಬದಿ ಸವಾರ ಪರಶುರಾಮ ಸಾದಾಶಿವ ಶಿಂಗೆ ಇವರು ಆಕ್ರಮವಾಗಿ ಯಾವುದೇ ಪರವಾನಿಗೆ ಇಲ್ಲದ ಕಲಬೇರಿಕೆ ಶೆಂದಿಯನ್ನು ತನ್ನ ತಾಬಾಯಲ್ಲಿ ಹೊಂದಿ ಮಾರಾಟಕ್ಕಾಗಿ ಒಯಿತ್ತಿರುವಾಗ ಹೀರೆಬೇವನೂರ ಗ್ರಾಮದಲ್ಲಿ ಆರೋಪಿತರ ತಾಬಾದಲ್ಲಿ ಸಿಕ್ಕ ಮುದ್ದೆ ಮಾಲಿಗಳಿಂದ ಒಟ್ಟು ಒಂದು ಲೀಟರ ಸಾಮಾರ್ಥದ ಎರಡು ಕಲಬೇರಿಕೆ ಶೆಂದಿ ತುಂಬಿದ ಬಾಟಲಿಗಳನ್ನು ರಾ.ಪ.ವಗಾಗಿ ಬೇರ್ಪಡಿಸಿ, ನಮ್ಮ ಸಮಕ್ಷಮ ಮುದ್ದೆ ಮಾಲು ಮತ್ತು ದ್ವಿ ಚಕ್ರವಾಹನವನ್ನು ಜಪ್ತು ಪಡಿಸಿಕೊಂಡು ನನ್ನ ಮತ್ತು ಚಾಸಾ–2 ರವರ ಸಮಕ್ಷಮ ಪಂಚನಾಮೆಯನ್ನು ಮಾಡಿಕೊಂಡಿರುತ್ತಾರೆ. ಓದಿ ಹೇಳಿದ ಮೇರೆಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಪಿ;–3 ರಂತೆ ಪಂಚನಾಮೆಯನ್ನು ಜರುಗಿಸಿದರು ಸಹ ಆರೋಪಿತರಿಗೆ ಸಹಾಯ ಮಾಡಲು ಇಲ್ಲ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ಧೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ: ಯಾವುದೇ ಪಾಟೀ ಸವಾಲು ಇರುವುದಿಲ್ಲ ಅಂತಾ ಸೂಚಿಸಿರುತ್ತಾರೆ.**

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ. ಸರಿ ಇದೆ.
ಸಹಿ/–
**ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.,**